# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1875** |
| ಸದಸ್ಯರ ಹೆಸರು | : | ಶ್ರೀ ಸಿ.ಎನ್. ಮಂಜೇಗೌಡ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 23-03-2026 |
| ಉತ್ತರಿಸುವ ಸಚಿವರು | | ಮಾನ್ಯ ಇಂಧನ ಸಚಿವರು |

****

| | ಪ್ರಶ್ನೆ | ಉತ್ತರ |
|---|---|---|
| ಅ) | ಕೇಂದ್ರ ಇಂಧನ ಸಚಿವಾಲಯ ಬಿಡುಗಡೆ ಮಾಡಿದ 14 ನೇ ವಾರ್ಷಿಕ ಸಮಗ್ರ ರೇಟಿಂಗ್ ಮತ್ತು ಯಾರ್ಕಿಂಗ್ ನಲ್ಲಿ ಬೆಸ್ಕಾಂ 51 ನೇ ಸ್ಥಾನಕ್ಕೆ ಕುಸಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ವಿದ್ಯುತ್ ವಿತರಣೆ ಸಂಸ್ಥೆಗಳ ಸಮಗ್ರ ರೇಟಿಂಗ್ ಅನ್ನು Ministry of Power ವತಿಯಿಂದ Power Finance Corporation ಸಮನ್ವಯದಲ್ಲಿ ನಡೆಸಲಾಗುತ್ತದೆ. |
| ಆ) | ಕಳೆದ ಸಾಲಿನಲ್ಲಿ (13ನೇ ವಾರ್ಷಿಕ ವರದಿ) 34ನೇ ಯಾರ್ಕಿಂಗ್ ನಲ್ಲಿದ್ದ ಬೆಸ್ಕಾಂ, ಪ್ರಸ್ತುತ 51ನೇ ಸ್ಥಾನಕ್ಕೆ ಕುಸಿಯಲು ಮತ್ತು 'ಮೈನಸ್' ಸಿ' ರೇಟಿಂಗ್ ಹಾಗೂ 'ರೆಡ್ ಕಾರ್ಡ್' ಪಡೆಯಲು ಪ್ರಮುಖ ಕಾರಣಗಳೇನು; | ಬೆಸ್ಕಾಂ ಸಂಸ್ಥೆಯು 2005-06 ರಿಂದ 2019-20 ರವರೆಗಿನ ಸಂಬಂಧಿಸಿದ ವರ್ಷಗಳ ಲೆಕ್ಕಗಳಲ್ಲಿ ಪರಿಗಣಿಸದ ವೆಚ್ಚಗಳನ್ನು 2023-24 ಮತ್ತು 2024-25 ನೇ ಸಾಲಿನ ಆರ್ಥಿಕ ವರ್ಷಗಳಲ್ಲಿ ಲೆಕ್ಕಪತ್ರದಲ್ಲಿ ನಮೂದಿಸಿದೆ. ಇದರಿಂದಾಗಿ ಒಟ್ಟಾರೆ ವೆಚ್ಚದಲ್ಲಿ ಹೆಚ್ಚಳ ಉಂಟಾಗಿದ್ದು, ಪರಿಣಾಮವಾಗಿ ಇತ್ತೀಚಿನ ವರ್ಷಗಳ ಆರ್ಥಿಕ ವಿವರಣ ಪತ್ರಗಳಲ್ಲಿ ಹೆಚ್ಚಿನ ನಷ್ಟ ಪ್ರತಿಫಲಿಸಿರುವುದರಿಂದ 34ನೇ ಯಾರ್ಕಿಂಗ್ ನಲ್ಲಿದ್ದ ಬೆಸ್ಕಾಂ, 51ನೇ ಸ್ಥಾನಕ್ಕೆ ಕುಸಿಯಲು ಪ್ರಮುಖ ಕಾರಣಗಳಲ್ಲಿ ಒಂದಾಗಿದೆ.<br><br>ಮುಂದುವರೆದು, ವಿದ್ಯುತ್ ಖರೀದಿ ವೆಚ್ಚ ಮತ್ತು ಇತರೆ ವೆಚ್ಚಗಳು, ಆರ್ಥಿಕ ವರ್ಷ 2024-25 ನೇ ಸಾಲಿನಲ್ಲಿ ಹೆಚ್ಚಾಗಿರುವುದರಿಂದ ಸರಾಸರಿ ವಿದ್ಯುತ್ ಸರಬರಾಜಿನ ವೆಚ್ಚ ಮತ್ತು ಆದಾಯದ ಅಂತರ ಅಧಿಕವಾಗಿರುವುದರಿಂದ ರೇಟಿಂಗ್ ಕುಸಿದಿರುತ್ತದೆ. |
| ಇ) | ಬೆಸ್ಕಾಂ ಒಟ್ಟಾರೆ ರೂ. 13,819 ಕೋಟಿ ನಷ್ಟ ಅನುಭವಿಸುತ್ತಿರುವುದು ಹಾಗೂ ರೂ. 22,611 ಕೋಟಿ ಸಾಲ ಹೊಂದಿರುವುದು ನಿಜವೇ; 2025 ರಲ್ಲಿ ಸಂಸ್ಥೆಯು ರೂ. 5,476 ಕೋಟಿ ನಷ್ಟ ಅನುಭವಿಸಲು ಕಾರಣವಾದ ಆಡಳಿತಾತ್ಮಕ ಅಥಾವ ತಾಂತ್ರಿಕ ವೈಫಲ್ಯಗಳೇನು; | ಬೆವಿಕಂಪನಿಯಲ್ಲಿ ಆರ್ಥಿಕ ವರ್ಷ 2024-25 ನೇ ಸಾಲಿನಲ್ಲಿ ಒಟ್ಟಾರೆ ರೂ. 13,819 ಕೋಟಿ ನಷ್ಟವಿದ್ದು, ರೂ. 22,611 ಕೋಟಿ ಸಾಲ ಹೊಂದಿರುತ್ತದೆ. ಮುಂದುವರೆದು, ಆರ್ಥಿಕ ವರ್ಷ 2024-25 ನೇ ಸಾಲಿನಲ್ಲಿ ರೂ. 5,476 ಕೋಟಿ ನಷ್ಟ ಅನುಭವಿಸಲು ಈ ಕೆಳಕಂಡ ಪ್ರಮುಖ ಕಾರಣಗಳಿರುತ್ತವೆ:<br><br>1) ಮಾನ್ಯ ಆಯೋಗವು 2024-25ರ ಸಾಲಿಗೆ ರೂ. 9.54 ಸರಾಸರಿ ದರವನ್ನು ಪ್ರತಿ ಯುನಿಟ್ ಗೆ ನಿಗದಿಪಡಿಸಿರುತ್ತದೆ. ಬೆವಿಕಂಪನಿ ರೂ. 8.95 ಪ್ರತಿ ಯೂನಿಟ್‌ಗೆ ಸರಾಸರಿ ಆದಾಯವನ್ನು ತಮ್ಮ ಗ್ರಾಹಕರಿಂದ ಪಡೆದಿರುತ್ತದೆ. ಇದರಿಂದಾಗಿ ಸುಮಾರು ರೂ. 1800 ಕೋಟಿಗಳಷ್ಟು ಕಡಿಮೆ ಆದಾಯ ಸಂಗ್ರಹವಾಗಿರುತ್ತದೆ. |

| | | |
|---|---|---|
| | | 2) ಬೆಸ್ಕಾಂ ಸಂಸ್ಥೆಯು 2005-06 ರಿಂದ 2019-20 ರವರೆಗಿನ ಸಂಬಂಧಿಸಿದ ವರ್ಷಗಳ ಲೆಕ್ಕಗಳಲ್ಲಿ ಪರಿಗಣಿಸದ ವಿದ್ಯುತ್ ಖರೀದಿ ವೆಚ್ಚದ ಬಗ್ಗೆ ಲೆಕ್ಕಪರಿಶೋಧಕರ ವರದಿಯನ್ವಯ ಸುಮಾರು ರೂ. 3676 ಕೋಟಿಗಳಷ್ಟು ವೆಚ್ಚವನ್ನು 2024-25 ನೇ ಸಾಲಿನ ಆರ್ಥಿಕ ವರ್ಷದ ಲೆಕ್ಕಪತ್ರದಲ್ಲಿ ಲೆಕ್ಕಿಸಿದೆ. |
| ಈ) | ಸಂಪನ್ಮೂಲ ಸಂಗ್ರಹ, ಬಿಲ್ಲಿಂಗ್ ಮತ್ತು ಪ್ರಸರಣ ನಷ್ಟದಂತಹ 15 ಮಾನದಂಡಗಳಲ್ಲಿ ಬೆಸ್ಕಾಂ ವೈಫಲ್ಯ ಕಂಡಿರುವುದನ್ನು ಸರಿಪಡಿಸಲು ಹಾಗೂ ಸಂಸ್ಥೆಯು ಆರ್ಥಿಕ ಆರೋಗ್ಯ ಸುಧಾರಿಸಲು ಸರ್ಕಾರ ರೂಪಿಸಿರುವ ಕಾರ್ಯಯೋಜನೆಗಳೇನು? | ಬೆವಿಕಂಪನಿಯ ನಷ್ಟವನ್ನು ಸುಧಾರಿಸಲು ಸರಿಪಡಿಸಲು ಕೈಗೊಂಡ ಕ್ರಮಗಳು ಈ ಕೆಳಕಂಡಂತಿದೆ:<br><br>1) ಅಧಿಕ ಬಡ್ಡಿ ದರದ ಸಾಲಗಳನ್ನು ಕಡಿಮೆ ಬಡ್ಡಿ ದರದ ಸಾಲಗಳನ್ನಾಗಿ ಪುನರ್ ರಚಿಸುವ ಕ್ರಮಕೈಗೊಳ್ಳಲಾಗುತ್ತಿದೆ.<br>ನವೀಕರಿಸಬಹುದಾದ ವಿದ್ಯುತ್ ಖರೀದಿಯನ್ನು ಹೆಚ್ಚಿಸಿ, ಇತರೆ ಮೂಲಗಳ ವಿದ್ಯುತ್ ಖರೀದಿಯನ್ನು ಕಡಿಮೆಗೊಳಿಸಿ, ವಿದ್ಯುತ್ ಖರೀದಿ ವೆಚ್ಚವನ್ನು ನಿಯಂತ್ರಿಸಲು ಕ್ರಮ ವಹಿಸಲಾಗುತ್ತಿದೆ. |

ಸಂಖ್ಯೆ: ಎನರ್ಜಿ 95 ಇಬಿಎಸ್ 2026

(ಕೆ.ಜೆ.ಜಾರ್ಜ್)
ಇಂಧನ ಸಚಿವರು